ಅವನ ಅಂತಹ ಸಂದಿಗ್ಧ ಪರೀಕ್ಷೆಯ ಸಂದರ್ಭದಲ್ಲಿ ಯಾವಾಗಲೂ ಆಪತ್ಬಾಂಧವನಂತೆ ಆಗಮಿಸುತ್ತಿದ್ದವನು ಸ್ಟೆನೋ ನಾಯಕ್. ಅಂದೂ ಕೂಡ ಹಾಗೆಯೇ ಆಯಿತು. ಬಾಗಿಲ ಬಳಿ ಬಂದು ನಿಂತ ನಾಯಕ್, ರಾಬಿಯಾಳನ್ನು ಕಂಡು ಬಾಗಿಲ ಬಳಿಯೇ ಸ್ಥಿರವಾದ. ಒಳಗೆ ಅಡಿ ಇಡಲೊ ಬೇಡವೊ ಎಂದು ಮೀನಮೇಷ ಎಣಿಸುತ್ತಿರುವಾಗಲೇ ಅವಳು ಅಲ್ಲಿಂದ ಹೊರ ನಡೆದಳು – ಕಣ್ಣಿನಲ್ಲಿ ಮೂಡಿದ್ದ ತೂಫಾನನ್ನು ಯಾರೂ ಕಾಣದೆ ಇರಲಿ, ತನ್ನ ಕಂಗಳ ಮುತ್ತುಗಳನ್ನು ಯಾರೂ ಅಪಹರಿಸದೆ ಇರಲಿ ಎಂಬಂತೆ. ಎಲ್ಲವೂ ಸರಿ ಇಲ್ಲ ಎಂದು ನಾಯಕ್‌ಗೆ ಅನಿಸಿತು. ಮತ್ತು ಅದು ಅವರಿಬ್ಬರ ಮಗಳ ಮದುವೆಯ ವಿಷಯಕ್ಕೆ ಸಂಬಂಧಪಟ್ಟಿದ್ದು ಅಂತಲೂ ಅವನಿಗೆ ಖಾತರಿಯಾಯಿತು. ಆದರೂ ಸಾಹೇಬರ ಎದುರಿಗೆ ತಾನು ತುಟಿ ಬಿಚ್ಚುವುದು ಸೂಕ್ತವಲ್ಲ ಎಂಬುದು ಅವನ ಅನುಭವದ ವಿಷಯವಾಗಿತ್ತು. ಸುಮಾರು ಒಂದು ಗಂಟೆಯವರೆಗೆ ಡಿಕ್ಟೇಶನ್ ಹೇಳಿದ ಅವನು ತೀರ್ಪಿನ ಕೊನೆಯ ಭಾಗವನ್ನು ಹೇಳದೆ ಉಳಿಸಿಕೊಂಡ. ಸಂಬಂಧ ಪಟ್ಟ ವಕೀಲರಿಗೆ ನಾಯಕ್ ತೀರ್ಪಿನ ಗುಟ್ಟನ್ನು ಮುಂಚಿತವಾಗಿಯೇ ರಟ್ಟು ಮಾಡಿ ಅವರಿಂದ ಹಣ ಪಡೆಯಬಹುದೇನೋ ಎಂಬ ಆತಂಕ ಅವನಿಗೆ ಇತ್ತು. ಇದ್ದುದರಲ್ಲಿ ನಾಯಕ್ ಅತೀ ನಂಬಿಗಸ್ಥ ಎಂಬುದು ಅವನ ಅರಿವಿಗಿತ್ತು. ಆದರೂ ಅಪನಂಬಿಕೆ ಎನ್ನುವುದು ತನ್ನ ವ್ಯಕ್ತಿತ್ವದ ಭಾಗವೋ ಅಥವಾ ತನ್ನ ವೃತ್ತಿಯ ಆಶೀರ್ವಾದವೋ ಅವನಿಗೆ ಗೊತ್ತಿರಲಿಲ್ಲ. ಹೀಗಾಗಿ ಅವನು ತೀರ್ಪಿನ ಅಂತಿಮ ಭಾಗವನ್ನು ಉಳಿಸಿಕೊಂಡು ಒಮ್ಮೆ ವಾಚನ್ನು ನೋಡಿಕೊಂಡ. ಈಗಾಗಲೇ ಇದ್ದ ಪದ್ಧತಿಯಂತೆ ಜಡ್ಜ್‌ಮೆಂಟಿನ ಕೊನೆಯ ಭಾಗದಲ್ಲಿ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್ ಎಂದು ಟೈಪ್ ಮಾಡಿದ. ತೀರ್ಪಿನ ನಿರ್ಣಾಯಕ ಭಾಗವನ್ನು ಕೋರ್ಟ್ ಹಾಲಿನಲ್ಲಿ ಅವನೇ ಟೈಪ್ ಮಾಡುತ್ತಿದ್ದ, ಅಥವಾ ನ್ಯಾಯಾಲಯದ ಟೈಪಿಸ್ಟಿಗೆ ಉಕ್ತಲೇಖನ ಹೇಳುತ್ತಿದ್ದ. ಹೀಗಾಗಿ ತನ್ನ ತೀರ್ಪು ಮೊದಲೇ ಸೋರಿಕೆಯಾಗುವುದನ್ನು ಯಶಸ್ವಿಯಾಗಿ ತಡೆದೆನೆಂಬ ತೃಪ್ತಿ ಅವನಿಗೆ ಇತ್ತು.

ಅವನು ಸಿದ್ಧನಾಗುವಷ್ಟರಲ್ಲಿ ಟೇಬಲ್ ಮೇಲೆ ನಾಷ್ಟಾ ಇತ್ತು. ರಾಬಿಯಾ ಕಂಡು ಬರಲಿಲ್ಲ. ಇನ್ನು ಎರಡು ಮೂರು ದಿನಗಳವರೆಗೆ ಅವನು ಅಗೋಚರ ವ್ಯಕ್ತಿಯೊಂದಿಗೆ ದಾಂಪತ್ಯ ಜೀವನವನ್ನು ನಡೆಸಬೇಕಾಗುವುದೆಂಬುದು ಅವನ ಭೂತಕಾಲದ ಅನುಭವ. ಮತ್ತೆ ಅವನ ಮನ ಗಿರಿಕಿ ಹೊಡೆಯಲಾರಂಭಿಸಿತು. ಅವನು ಅಪಾರ ಅಧಿಕಾರವನ್ನು ಹೊಂದಿದ್ದ; ವಿನಯಪೂರ್ವಕವಾಗಿ ತನ್ನೆದುರು ಬಾಗಿದ್ದ ನಡುಗಳ ಲೆಕ್ಕವಿಟ್ಟಿರಲಿಲ್ಲ ಅವನು. ಒಂದು ಸಾರಿಯಂತೂ ಕೊಲೆಯ ಪ್ರಕರಣವೊಂದರ ತೀರ್ಪು ಹೇಳುವ ದಿನವಂತೂ ಎದುರಿಗೆ ಕೈ ಜೋಡಿಸಿ ನಿಂತಿದ್ದ ಆರೋಪಿ ಗಡಗಡನೆ ನಡುಗಲಾರಂಭಿಸಿದ್ದ. ಇಡೀ ಕೋರ್ಟು ವಿಷಾದದಲ್ಲಿ ಮುಳುಗಿ ಹೋಯಿತು. ಒಂದು ರೀತಿಯ ಕರಿ ಛಾಯೆ ಹೊದ್ದುಕೊಂಡು ಅವಿತಿರುವ ಗುಮ್ಮನಂತೆ. ಎಲ್ಲರ ದೃಷ್ಟಿ ಅವನತ್ತ, ನ್ಯಾಯ ಪರಾಮರ್ಶೆಯನ್ನು ಮಾಡಿ ತೀರ್ಪನ್ನು ಘೋಷಿಸುವವನತ್ತ. ಆ ಸಂದರ್ಭದಲ್ಲಿ ಅವರೆಲ್ಲರ ನೋಟವು ಒಟ್ಟಾಗಿ ತನ್ನತ್ತ ತಿರುಗಿದ ಆ ತೀವ್ರತೆಯು ಅವನನ್ನು ಒಳಗಿಂದೊಳಗೇ ನಡುಗಿಸಲಾರಂಭಿಸಿತು. ಆರೋಪಿಗೆ ಕಾಣುವಂತೆ ನಡುಕ; ತನಗಾದರೋ ಬೇರೆಯವರಿಗೆ ಕಾಣದಂತೆ ಆಂತರಿಕ ನಡುಕ. ತನ್ನ ತೀರ್ಪು ತನಿಖೆಯಾಧಾರಿತವಾದುದು. ತನಿಖೆ ದೋಷಪೂರಿತವಾಗಿದ್ದರೆ, ಅಥವಾ ಪೂರ್ವ ನಿರ್ದೇಶಿತವಾಗಿದ್ದರೆ, ದುರುದ್ದೇಶಪೂರ್ವಕವಾಗಿದ್ದರೆ, ಆಗ ತಾನು ಅದನ್ನು ಆಧರಿಸಿ ನೀಡುವ ತೀರ್ಪು ಏನು ಪರಿಣಾಮ ಬೀರಬಹುದು? ಅಪರಾಧಿ ವಿಜೃಂಭಿಸುತ್ತಾ ಗೇಟು ತೆರೆದು ಹಾರ ಹಾಕಿಸಿಕೊಂಡು ಮೆರವಣಿಗೆ ಹೊರಡಬಹುದು. ಅಥವಾ ನಿರಪರಾಧಿಯೊಬ್ಬ ನೇಣಿಗೆ ಕೊರಳೊಡ್ಡಬಹುದು.

ಅಪರಾಧದ ಹಿನ್ನೆಲೆಯಲ್ಲಿ ಸುರುಳಿ ಸುತ್ತುತ್ತ ಅಟ್ಟಹಾಸಗೈಯುವ ಮನುಷ್ಯ ಸಂಬಂಧಗಳ ಸಂಕೀರ್ಣತೆಯು ಅವನನ್ನು ಅಪಾರವಾಗಿ ಕಾಡಿಸುವ ಇನ್ನೊಂದು ಭೂತ. ಅಪ್ಪನ ಕಸ್ಟಡಿಯಲ್ಲಿದ್ದ